**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**ಸಿ.ಸಿ. ನಂ. 662/2019.**

**ಸಿ ಡಬ್ಲ್ಯೂಃ 29**

**ಪಿ ಡಬ್ಲ್ಯೂಃ 11**

| | | |
|---|---|---|
| ಹೆಸರು | : | ಲಿಂಗನಗೌಡ |
| ತಂದೆಯ ಹೆಸರು | : | ಬಸನಗೌಡ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಪೋಲೀಸ್ ಇನಸ್ಪೇಕ್ಟರ್ ಐಜಿಪಿ ಕಛೇರಿ |
| ವಾಸಸ್ಥಳ | : | ದಾವಣಗೆರೆ |

**ದಿನಾಂಕಃ 06-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ದಿಃ 29.09.2018 ರಿಂದ 21.09.2020 ರವರಿಗೆ ರಾಣೇಬೆನ್ನೂರು ಶಹರ ವೃತ್ತದ ಸಿಪಿಐಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ರಾಣೇಬೆನ್ನೂರು ಶಹರದ ಪೋಲೀಸ ಠಾಣೆಯ ಅಪರಾಧ ಸಂಖ್ಯೆಃ 124/2015 ಪ್ರಕರಣದಲ್ಲಿ ಮಾಲು ಮತ್ತು ಆರೋಪಿಗಳ ಪತ್ಯೆಗಾಗಿ ನಾನು ಮತ್ತು ನಮ್ಮ ಠಾಣೆಯ ಸಿಬ್ಬಂದಿಗಳು ಹಾಗೂ ಚಾಸಾ-28 ರವರೊಂದಿಗೆ ದಿಃ 04.11.2018 ರಂದು ಶಿವನಂದಿ ಹೋಟೇಲ್ ಹತ್ತಿರ ಗಸ್ತುನಲ್ಲಿ ಇದ್ದಾಗ, ರಾಣೇಬೆನ್ನೂರಿನಿಂದ ಹರಿಹರದ ಕಡೆಗೆ ಒಂದು ಆಟೋದಲ್ಲಿ 02 ಜನ, 1 ಬೈಕಿನಲ್ಲಿ ಒಬ್ಬನು ಬರುತ್ತಿದ್ದು, ನಮ್ಮನ್ನು ನೋಡಿ ಅನುಮಾನಸ್ಪದ ನೋಡಿ ಅವರನ್ನು ಹಿಡಿದು ಅವರ ಹೆಸರನ್ನು ಕೇಳಿ, ಆಟೋ ಚಲಾಯಿಸುತ್ತಿದ್ದವನ ಹೆಸರು ಪಕ್ಕೀರೇಶ ಅಲಿಯಾಸ ಪ್ರಕಾಶ ತಂದೆ ಹೊನ್ನಪ್ಪ ಅರಬಗೊಂಡ, ಆಟೋದ ಹಿಂದೆ ಕುಳಿತಿದ್ದ ನಾಗರಾಜ ಹನುಮಂತಪ್ಪ, ಅರೇಮಲ್ಲಾಪೂರ, ಹಾಲಿ ವಸ್ತಿ. ರಾಣೇಬೆನ್ನೂರು, ಬೈಕಿನಲ್ಲಿ ಹೋಗುತ್ತಿದ್ದವನು ಮಹೇಶ ಹೊನ್ನಪ್ಪ ಎಂದು ತಿಳಿಸಿರುತ್ತಾರೆ. ನಂತರ ಆಟೋ ಮತ್ತು ಬೈಕು ಹಾಗೂ ಆಟೋದಲ್ಲಿ ಇದ್ದ ಕಂಪ್ಯೂಟರ ಬಗ್ಗೆ ಕೇಳಿದಾಗ ಬೇರೆ

ಬೇರೆ ಸ್ಥಳದಿಂದ ಕಳ್ಳತನ ಮಾಡಿದ್ದು ಅವುಗಳನ್ನು ಮಾರಾಟ ಮಾಡಲು ಹೋಗುತ್ತಿರುವುದಾಗಿ ತಿಳಿಸಿದಾಗ, ಪಂಚರಾದ ಚಾಸಾ-17 ಮತ್ತು 18 ರವರಿಗೆ ನೋಟೀಸ ಜಾರಿ ಮಾಡಿ, ವಿಚಾರ ತಿಳಿಸಿ ನಂತರ ಅವರ ಸಮಕ್ಷಮ ಪಂಚನಾಮೆ ಜರುಗಿಸಿ, ಆಟೋ ಒಂದು ಬೈಕು, ಐಬಿಎಮ್ ಕಂಪನಿಯ 2- ಕಂಪ್ಯೂಟರ ಸಿಪಿಯುಗಳನ್ನು ಹಾಗೂ ಡೆಲ್ ಕಂಪನಿಯ ಎರಡು ಮಾನಿಟರ್, ಐಬಿಎಮ್ ಕಂಪನಿಯ 2 ಕೀ ಬೋರ್ಡಗಗಳನ್ನು ವಶಪಡಿಸಿಕೊಂಡು ಬೆಳಗ್ಗೆ 07-30 ರಿಂದ 08-30 ರವರೆಗೆ ಅಂಗಶೋದನಾ ಪಂಚನಾಮೆ ಜರುಗಿಸಿ, ನಂತರ ಪೋಲೀಸ ಠಾಣೆಗೆ ಬಂದು ಮಾಲುಗಳನ್ನು ಪಿಎಪ್ ನಂಬರ 84/2018 ರಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತದೆ. ಅಂಗಶೋದನಾ ಪಂಚನಾಮೆಯನ್ನು ನಿಪಿ-16, ಸಾಕ್ಷಿಯ ಸಹಿಯನ್ನು ನಿಪಿ-16 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ 08 ಪೋಟೋಗಳನ್ನು ತೆಗೆದಿರುತ್ತೇವೆ. ಆ ಪೋಟೋಗಳನ್ನು ಒಟ್ಟಾಗಿ ನಿಪಿ-17 ಎಂದು ಗುರುತಿಸಲಾಯಿತು. ನಂತರ ಆರೋಪಿತರ ದಸ್ತುಗಿರಿ ನಿಯಮ ಅನುಸರಿಸಿ, ದಸ್ತುಗಿರಿ ಮಾಡಿ, ನಂತರ ಅವರ ಸ್ವ-ಇಚ್ಚೆ ಹೇಳಿಕೆಯನ್ನು ಪಡೆದಿದ್ದು ಸದರಿಯವರು ತಮ್ಮ ಹೇಳಿಕೆಯಲ್ಲಿ ಬೇರೆ ಬೇರೆ ದಿನಾಂಕ ಮತ್ತು ಸ್ಥಳಗಳಲ್ಲಿ ಸಿಲೆಂಡರಗಳನ್ನು, ಆಟೋ ರೀಕ್ಷಾ, ಬೈಕ್ ಹಾಗೂ ಕಂಪ್ಯೂಟರಗಳನ್ನು ಕಳ್ಳತನ ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾರೆ. ತಮ್ಮನ್ನು ಕರೆದುಕೊಂಡು ಹೋದರೆ ಬೇರೆ ಪ್ರಕರಣದ ಕಳ್ಳತನ ಮಾಡಿದ ಮಾಲನ್ನು ಹಾಗೂ ಸ್ಥಳವನ್ನು ತೋರಿಸಿ ಹಾಜರು ಪಡಿಸಿರುವುದಾಗಿ ಹೇಳಿದ ಮೇರೆಗೆ ಆರೋಪಿತರನ್ನು ಹಾಗೂ ಪಂಚರನ್ನು ಕರೆದುಕೊಂಡು 3 ನೇ ಆರೋಪಿಯ ರಾಣೇಬೆನ್ನೂರು ಕೂನಬೇವು ಪ್ಲಾಟ್‌ಗೆ ನಮ್ಮನ್ನು ಕರೆದುಕೊಂಡು ಹೋಗಿ, ಬೇರೆ ಪ್ರಕರಣದ ಹಿರೋ ಹೊಂಡಾ ಸ್ಲೆಂಡರ್ ಪ್ಲಸ್ ಬೈಕ, ಬಜಾಜ ಕಂಪನಿಯ ಆಟೋ ರೀಕ್ಷಾ, ಹಾಗೂ ಚಿಕ್ಕ ಹಳ್ಳಳ್ಳಿ ಶಾಲೆಯಲ್ಲಿ ಕಳ್ಳತನ ಮಾಡಿದ 02 ಗ್ಯಾಸ ಸಿಲೆಂಡರ ಹಾಗೂ ಕೆರೆಮಲ್ಲಾಪೂರದ ಶಾಲೆಯಲ್ಲಿ ಕಳ್ಳತನ ಮಾಡಿದ 03 ಇಂಡಿಯನ್ ಗ್ಯಾಸ ಸಿಲೆಂಡರ್ ಕಳ್ಳತನ ಮಾಡಿರುವುದನ್ನು ಪಂಚರ ಸಮಕ್ಷಮ ತೋರಿಸಿದ್ದು, ಸದರಿಯವರ ಸಮಕ್ಷಮ 10-45 ರಿಂದ 12-00 ಗಂಟೆಯವರೆಗೆ ಪಂಚನಾಮೆ ಮಾಡಿ, ಸದರಿ ವಸ್ತುಗಳನ್ನು ವಶಪಡಿಸಿಕೊಂಡು ಆ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತೇವೆ. ಸದರಿ ಪಂಚನಾಮೆಯನ್ನು ನಿಪಿ-18 ಎಂದು, ಸದರಿಯಲ್ಲಿನ ಸಹಿಯನ್ನು ನಿಪಿ-18 ಎ ಎಂದು ಗುರುತಿಸಾಯಿತು. ಸದರಿ ಕಾಲಕ್ಕೆ ತೆಗೆದ ಪೋಟೋಗಳನ್ನು ನಿಪಿ-19 ಎಂದು ಗುರುತಿಸಲಾಯಿತು.

ಸಿ.ಸಿ. ನಂ. 662/2019 ಸಿ. ಡಬ್ಲ್ಯೂ. 29
ಪಿ. ಡಬ್ಲ್ಯೂ. 11

ಆರೋಪಿತರು ತೋರಿಸಿದ ಮೇರೆಗೆ ಆರೋಪಿಯೊಂದಿಗೆ ಕೆರೆಮಲ್ಲಾಪೂರ ಗ್ರಾಮಕ್ಕೆ ಅವರು ಶಾಲೆಯಲ್ಲಿ ಕಳ್ಳತನ ಮಾಡಿದ ಸ್ಥಳ ತೋರಿಸುವುದಾಗಿ ಹೇಳಿ, ತೋರಿಸಿದ ಸ್ಥಳವನ್ನು ಮದ್ಯಾಹ್ನ 01 ರಿಂದ 01-30 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತೇವೆ. ಸದರಿ ಸಮಯದಲ್ಲಿ 02 ಪೋಟೋಗಳನ್ನು ತೆಗೆದಿರುತ್ತೇವೆ. ಪಂಚನಾಮೆಯನ್ನು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ- 20 ಎ ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡೆಸಿರುತ್ತೇನೆ. ಅದೇ ದಿನ ಚಾಸಾ-19 ರಿಂದ 28 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 10.12.2018 ರಂದು ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ನ್ಯಾಯಾಲಯದ ಅನುಮತಿಯನ್ನು ಪಡೆದು, ಮಾಲು ಮತ್ತು ಸಂಬಂದಿಸಿದ ದೃಡೀಕೃತ ದಾಖಲೆಯನ್ನು ಗ್ರಾಮಾಂತರ ಠಾಣೆಗೆ ವರ್ಗಾವಣೆ ಮಾಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 03 ಸಿಲೆಂಡರಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ.ರಾಣೇಬೆನ್ನೂರು.